ಕೈಪಂಪನ್ನು ಅಳವಡಿಸಲಾಗಿದೆ. ಟ್ಯಾಂಕ್‌ಗಳ ಮೂಲಕ ನೀರನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮೂಲಕ ಒದಗಿಸಲು ವ್ಯವಸ್ಥೆ ಮಾಡಲಾಗಿದೆ.

ಒಳಚರಂಡಿ ವ್ಯವಸ್ಥೆ:-ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಶೇ.80 ರಷ್ಟು ಒಳಚರಂಡಿ ವ್ಯವಸ್ಥೆಯ ಕೆಲಸಗಳನ್ನು ಪೂರ್ಣಗೊಳಿಸಿದೆ. ನೀರು ಸರಬರಾಜು ವ್ಯವಸ್ಥೆಯ ಕಾಮಗಾರಿಗಳು ಪೂರ್ಣಗೊಂಡ ನಂತರ ಒಳಚರಂಡಿ ಸಂಪರ್ಕಗಳನ್ನು ಪ್ರತಿಯೊಂದು ಮನೆಗೆ ನೀಡಲಾಗುವುದು. ಬಡಾವಣೆಯ ರಸ್ತೆಗಳ ಪೈಕಿ ಸುಮಾರು ಶೇ.80 ರಷ್ಟು ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗಿದೆ.

2) ದಿನಗೂಲಿ ನೌಕರರನ್ನು ಖಾಯಂ ಮಾಡುವ ಕುರಿತು

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಅಧ್ಯಕ್ಷರೆ, ಸರಕಾರದ ವಿವಿಧ ಇಲಾಖೆಯ ಕಚೇರಿಗಳಲ್ಲಿ 1-7-1984 ರಿಂದ ದಿನಗೂಲಿ ನೌಕರರಾಗಿ ಸಾಕಷ್ಟು ಜನರು ಸೇವೆ ಸೆಲ್ಲಿಸುತ್ತಿದ್ದು ಅವರುಗಳನ್ನು ಪೂರ್ಣ ಪ್ರಮಾಣದಲ್ಲಿ ಇದು ತನಕವೂ ಖಾಯಂ ಮಾಡಿಲ್ಲದೇ ಇರುವುದರಿಂದ ಅವರಲ್ಲಿ ಅನಿಶ್ಚಿತತೆಯ ಸ್ಥಿತಿಯು ಉಂಟಾಗಿದೆ. 1-7-84ರ ನಂತರ ಸೇರಿರುವ ಸಹಾಯಕ ಇಂಜಿನಿಯರ್ ಜ್ಯೂನಿಯರ್ ಇಂಜಿನಿಯರ್‌ಗಳ ಸೇವೆಯನ್ನು ಈಗಾಗಲೇ ಖಾಯಂಗೊಳಿಸಲಾಗಿದೆ. ಆದರೆ ಬಾಕಿ ಇತರ ಹುದ್ದೆಗಳಲ್ಲಿರುವ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ ಪೂರ್ಣಪ್ರಮಾಣದಲ್ಲಿ ಸರಕಾರದವರು ಕ್ರಮ ತೆಗೆದುಕೊಂಡಿಲ್ಲದ ಕಾರಣ ಅಂಥ ನೌಕರರು ಚಿಂತಿತರಾಗುವಂತೆ ಆಗಿದೆ.

ಆದುದರಿಂದ ನಿಯಮಗಳ ಪ್ರಕಾರ ಯಾರು ದಿನಗೂಲಿ ನೌಕರರು ಎಂದು ಪರಿಗಣಿಸಲ್ಪಟ್ಟಿರುತ್ತಾರೋ ಯಾರ ಸೇವೆಯು ಹತ್ತು ವರ್ಷಗಳಿಗಿಂತ ಹೆಚ್ಚು ಆಗಿದೆಯೋ ಅಂಥವರೆಲ್ಲರನ್ನು ಖಾಯಂಗೊಳಿಸುವ ಬಗ್ಗೆ ಸರಕಾರದವರು ಸಕಾಲಿಕ ಕ್ರಮವನ್ನು ಜರುಗಿಸಿ ಸಹಸ್ರಾರು ಕುಟುಂಬಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ (ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲಾ ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ಸಂಘವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ:8307-11:83 ರಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ 23-2-90 ರಂದು ತನ್ನ ಅಂತಿಮ ತೀರ್ಪಿನಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84 ರಂದು ಅಥವಾ ಅದಕ್ಕಿಂತ ಮೊದಲು ನೇಮಕಗೊಂಡ ಸಾಂದರ್ಭಿಕ: ದಿನಗೂಲಿ ನೌಕರರನ್ನು ದಿನಾಂಕ 31-12-97 ರೊಳಗಡೆ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವಂತೆ ನೀಡಿದ ಆದೇಶದ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 2 ಎಸ್ ಎಲ್ ಸಿ 90, ದಿನಾಂಕ 6-8-90 ರ ಆದೇಶವನ್ನು ಹೊರಡಿಸಲಾಗಿದೆ.

(2) ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ರೇಷ್ಮೆ ಇಲಾಖೆ ಮತ್ತು ಇತರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಕೆಲವೊಂದು ಪದವೀಧರ ಇಂಜಿನಿಯರ್‌ಗಳು ಮತ್ತು ಡಿಪ್ಲೋಮಾ ಇಂಜಿನಿಯರ್‌ಗಳು ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 737:90, 738:90 1038:90 ಮತ್ತು 297:91ನ್ನು ಸಲ್ಲಿಸಿ, ತಮ್ಮ ಸೇವೆಯನ್ನು ಸಕ್ರಮಗೊಳಿಸುವಂತೆ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತೆ ಕೋರಿದ್ದು,

ಸರ್ವೋನ್ನತ ನ್ಯಾಯಾಲಯವು ದಿನಾಂಕ 22.4.91ರಂದು ನೀಡಿದ ಆದೇಶದ ಮೇರೆಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಹಾಗೂ 1-7-84 ರಂದು ಅಥವಾ ಆ ತರುವಾಯ ಆದರೆ 15-10-92 ರಂದು ಅಥವಾ ಅದಕ್ಕೆ ಮುಂಚೆ ನೇಮಕಗೊಂಡ ದಿನಗೂಲಿ ಪದವೀಧರ ಇಂಜಿನಿಯರ್‌ಗಳು ಮತ್ತು ಡಿಪ್ಲೋಮಾ ಇಂಜಿನಿಯರ್‌ಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 13 ಸೇಸ್ಥಆ 94, ದಿನಾಂಕ 29-9-94ರ ಆದೇಶದಲ್ಲಿ ಸಕ್ರಮಗೊಳಿಸುವಂತೆ ಆದೇಶಿಸಿದೆ. ಸರ್ವೋನ್ನತ ನ್ಯಾಯಾಲಯದ ತೀರ್ಪು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡ ಪದವೀಧರ ಇಂಜಿನಿಯರ್ ಮತ್ತು ಡಿಪ್ಲೋಮಾ ಇಂಜಿನಿಯರ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಈ ತೀರ್ಪು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಇತರೆ ದಿನಗೂಲಿ ನೌಕರರಿಗೆ ಅನ್ವಯಿಸುವುದಿಲ್ಲ.

3)ಈ ಆದೇಶದ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಆದೇಶ ಸಂಖ್ಯೆ: ಪಿಡಬ್ಲ್ಯುಡಿ 357 ಪಿಡಬ್ಲ್ಯುಸಿ 90, ದಿನಾಂಕ 2-12-94 ರ ಆದೇಶವನ್ನು ಹೊರಡಿಸಿದೆ,

(4)ಅಧಿಕೃತ ಜ್ಞಾಪನ ಸಂಖ್ಯೆ : ಡಿಪಿಎಆರ್ 10 ಎಸ್‌ಎಲ್‌ಸಿ 83, ದಿನಾಂಕ 3-7-84 ರಲ್ಲಿ ಲೋಕೋಪಯೋಗಿ ಇಲಾಖೆಯನ್ನು ಹೊರತುಪಡಿಸಿ, ಇನ್ನಿತರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ರಾಜ್ಯ ಸರ್ಕಾರವು ದಿನಗೂಲಿ ನೌಕರರನ್ನು ನೇಮಕ ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇದಿಸಿದೆ. ಈ ರೀತಿ ಸೂಚನೆಗಳನ್ನು ನೀಡಿದ್ದರೂ ಸಹ ಅನೇಕ ಸರ್ಕಾರಿ ಇಲಾಖೆಗಳಲ್ಲಿ ದಿನಗೂಲಿ ನೌಕರರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.

(5) ಕರ್ನಾಟಕ ಸರ್ಕಾರಿ ದಿನಗೂಲಿ ನೌಕರರ ಮಂದಲ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 8192:90ನ್ನು ಸಲ್ಲಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 11-4-90ರ ಮಧ್ಯಂತರ ಆದೇಶದಲ್ಲಿ 240 ದಿನಗಳ ಸತತ ಸೇವೆ ಸಲ್ಲಿಸಿದ ದಿನಗೂಲಿ ನೌಕರರನ್ನು ಕೆಲಸದಿಂದ ತೆಗೆದುಹಾಕದಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಕರ್ನಾಟಕ ಸಾಂದರ್ಭಿಕ: ದಿನಗೂಲಿ ನೌಕರರ ಸಂಘ, ಹುಬ್ಬಳ್ಳಿ, ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ : 12610:93 ಸಲ್ಲಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 23-4-93ರ ಆದೇಶದಲ್ಲಿ 1-7-84ರ ನಂತರ ನೇಮಕಗೊಂಡು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಜಿಲ್ಲಾ ಪರಿಷತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ ನೌಕರರನ್ನು ತೆಗೆದುಹಾಕುವುದನ್ನು ತಡೆಹಿಡಿದಿದೆ. ಈ ಎರಡೂ ರಿಟ್ ಅರ್ಜಿಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ. ಈ ಹಿನ್ನಲೆಯಲ್ಲಿ 1-7-84ರ ನಂತರ ನೇಮಕಗೊಂಡ ದಿನಗೂಲಿ ನೌಕರರ ಸೇವೆಯಲ್ಲಿ ಮುಂದುವರಿಯುತ್ತಿದ್ದಾರೆ. ನ್ಯಾಯಾಲಯದ ಅಂತಿಮ ತೀರ್ಪು ಹೊರಬಿದ್ದ ನಂತರ, ಸರ್ಕಾರವು ಸಾಧಕ-ಬಾಧಕಗಳನ್ನು ಪರಿಶೀಲಿಸಿ ಅಂತಿಮ ನಿರ್ಣಯ ತೆಗೆದುಕೊಳ್ಳುವುದು.

ಶ್ರೀ ಎಸ್.ಯೋಗೀಶ್ ಭಟ್ (ಮಂಗಳೂರು):- ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯಲ್ಲಿರುವ ರಸ್ತೆಗಳು ಹಾಳಾಗಿದ್ದು ಹೊಂಡಗಳಿಂದ ತುಂಬಿದ್ದು, ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಗಳುಂಟಾಗಿದ್ದು ಅನೇಕ ವಾಹನ ಅಪಘಾತಗಳು ಉಂಟಾಗಿದ್ದು ಕಂಡು ಬಂದುದರಿಂದ ಸರಕಾರದ ಗಮನ ಸೆಳೆಯುತ್ತಾ, ತಕ್ಷಣ ವಿಶೇಷ